SRI VEERKUMAR A. PATIL.—What action the Government has taken to vacate the stay from the Hon'ble High Court. Hon'ble Minister says that no assurance has been given in this regard. But I would like to bring to the notice of the Hon'ble Minister that Hon'ble Chief Minister during his tour in Belgaum District has given assurance and it has come in the Press also. I would like to have a definite reply from the Hon ble Minister.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಸಚಿವರು).—೧೯೬೭ರಲ್ಲಿ ಈ ಕೆರೆ ಮಂಜೂರಾಗಿದೆ. ಇದಂ ೨.೧೧ ಕೋಟಿ ರೂಪಾಯಿಗಳಿಗೆ ಮಂಜೂರಾಯಿತು. ನಂತರ ಸರ್ಕಾರಿ ಪತ್ರ ದಿನಾಂಕ ೩೦–೧೧–೬೭ರ ಮೂಲಕ ಇದನ್ನು ಕೈಬಿಡಲಾಯಿತು. ಆಗಿನ ಮುಖ್ಯಮಂತ್ರಿಗಳು ಪರಿಶೀಲನೆ ಮಾಡಬಹುದೆಂದು ಹೇಳಿರಬಹುದು. ವಾಸ್ತವಾಂಶವನ್ನು ತಾವು ತಿಳಿದುಕೊಳ್ಳಬೇಕು ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಈ ಕೆಲಸ ಮಾಡಲು ಆಗುವುದಿಲ್ಲ. ಏಕೆಂದರೆ, ಬಹಳ ಬೆಲೆ ಬಾಳುವ ಜಮೀನು ಮುಳುಗಡೆಯಾಗುತ್ತದೆ. ೧೫ ಲಕ್ಷ ರೂಪಾಯಿ ಪರಿಹಾರಧನ ಕೊಡಬೇಕಾಗುತ್ತದೆ. ಮೂರೂವರೆ ಲಕ್ಷ ರೂಪಾಯಿಯಲ್ಲಿ ಕೆರೆ ಕಟ್ಟಲು, ೧೫ ಲಕ್ಷ ರೂಪಾಯಿ ಪರಿಹಾರ ಧನ ಕೊಡಬೇಕಾಗುತ್ತದೆ. ಆದು ಸಾಧುವಲ್ಲವೆಂದು ತಜ್ಞರ ಅಭಿಪ್ರಾಯ. ಪರ್ಕ್ಯುಲೇಷನ್ ಟ್ಯಾಂಕ್ ಮಾಡುವುದರಿಂದ ಕೆಲವು ಜಮೀನುಗಳಿಗೆ ಉಪಯೋಗ ಆಗುತ್ತದೆ ಎಂದು ಸರ್ಕಾರದ ಅಭಿಪ್ರಾಯವಿತ್ತು. ಕಪೂರ್ ಟೆನಲ್‌ನಿಂದ ಕೆಲಸ ಮುಗಿದ ಮೇಲೆ ನೀರು ಬರುತ್ತದೆ. ಆದುದರಿಂದ ಈ ಕೆಲಸವನ್ನು ಕೈಗೆತ್ತಿಕೊಳ್ಳುವುದು ಸಾಧ್ಯವಿಲ್ಲ ವೆಂದು ಹೇಳುತ್ತೇನೆ.

ಪ್ರಶ್ನೆ ಸಂಖ್ಯೆ ೪೯೧ (೧೨೬೦)
(ಸದಸ್ಯರು ಗೈರುಹಾಜರಿದ್ದರು)
ಪ್ರಶ್ನೆ ಸಂಖ್ಯೆ ೪೯೨ (೧೫೯೫)
(ಸದಸ್ಯರು ಗೈರು ಹಾಜರಿದ್ದರು)
ಪ್ರಶ್ನೆ ಸಂಖ್ಯೆ ೪೯೩ (೧೫೫೩)
(ಸದಸ್ಯರು ಗೈರು ಹಾಜರಿದ್ದರು)
ಪ್ರಶ್ನೆ ಸಂಖ್ಯೆ ೪೯೪ (೧೧೦೭)
(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಶಿವಮೊಗ್ಗ ತಾಲ್ಲೂಕು, ಕುಂಸಿ ಏತ ನೀರಾವರಿ ಯೋಜನೆ ಮಂಜೂರಾತಿ

೧೧೦೭. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಶಿವಮೊಗ ತಾಲ್ಲೂಕು ಕುಂಸಿ ಏತ ನೀರಾವರಿ ಯೋಜನೆ ೧೯೮೩–೮೪ರ ಬಜೆಟಿನಲ್ಲಿ ಮಂಜೂರಾಗಿರುವುದು ನಿಜವೆ ? ಹಾಗೂ ಆದರ ಪ್ರಗತಿ ಯಾವ ಹಂತದಲ್ಲಿದೆ ?

ಆ) ಈ ಯೋಜನಗೆ ತಗಲುವ ವೆಚ್ಚವೆಷ್ಟು ?

ಇ) ಮುಖ್ಯಮಂತ್ರಿಗಳು ಈ ಯೋಜನೆಯ ಬಗ್ಗೆ ಭರವಸೆ ಕೊಟ್ಟಿರುವುದು ನಿಜವೆ,

ಈ) ಈ ಯೋಜನೆ ಕಾರ್ಯಗತವಾದರೆ, ಎಷ್ಟು ಎಕರೆ ಭೂಮಿಯನ್ನು ನೀರಾವರಿಗೊಳಪಡಿಸಲಾಗುವುದು,

ಉ) ಈ ಯೋಜನೆ ಕಾರ್ಯರೂಪಕ್ಕೆ ಬರಲು ಎಷ್ಟು ಅವಧಿಯಾಗಬಹುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು).—

ಅ) ಇನ್ನೂ ಮಂಜೂರಾಗಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಮಾಜಿ ಮುಖ್ಯ ಮಂತ್ರಿಗಳು ಆ ಭಾಗದಲ್ಲಿ ಪ್ರವಾಸ ಕೈಗೊಂಡಾಗ, ಯೋಜನೆಯ ಅನ್ವೇಷಣೆಗೆ ಸೂಚನೆ ನೀಡಿದ್ದರು.

ಈ) ಕುಮುದ್ವತಿ ನದಿಯಲ್ಲಿ ನೀರಿನ ಕೊರತೆ ಇರುವುದರಿಂದ ಈ ಯೋಜನೆಯು ಅಸಾಧು (ಇನ್‌ಫೀಸಬಲ್) ಆಗಿದೆ.

ಉ) ಉದ್ಭವಿಸುವುದಿಲ್ಲ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೆ, ಈ ಕೆಲಸ ೮೫-೮೪ನೇ ಸಾಲಿನ ಬಜೆಟ್‌ನಲ್ಲಿ ಸೇರಿಸಿದ್ದರು. ಇಲ್ಲಿಯವರೆಗೂ ಮಂಜೂರಾಗಿಲ್ಲ. ಈ ಬಗ್ಗೆ ಮಂತ್ರಿಗಳು ಏನು ಹೇಳುತ್ತಾರೆಂಬುದನ್ನು ಕೇಳಲು ಬಯಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—೧೯೮೫-೮೪ರಲ್ಲಿ ಮತ್ತು ೮೪-೮೫ನೇ ಸಾಲಿನಲ್ಲಿ ಟೋಕನ್ ಗ್ರಾಂಟಿನಲ್ಲಿ ಈ ಕೆಲಸವು ಸೇರಿದ್ದು ನಿಜ. ಸೇರಿದ ತಕ್ಷಣ ಕೆಲಸಗಳಿಗೆ ಮಂಜೂರಾತಿ ಕೊಡಬೇಕಾದರೆ, ತಾಂತ್ರಿಕ ಅಭಿಪ್ರಾಯವೂ ಸಾಧುವಾಗಿರಬೇಕು. ೧೯೭೭ರಲ್ಲಿ ಆಗಿನ ಮುಖ್ಯಮಂತ್ರಿಗಳು ತನಿಖೆ ಮಾಡಿ ಎಂದು ಹೇಳಿದ್ದಾರೆ. ಇದರ ಮೇಲೆ ಪ್ರಾಜೆಕ್ಟ್ ಇನ್‌ವೆಸ್ಟಿಗೇಷನ್ ಮಾಡಿ ಕುಮುದ್ವತಿ ನದಿ ನೀರು ಸಿಕ್ಕುವುದಿಲ್ಲವೆಂಬ ಅಭಿಪ್ರಾಯ ಬಂದಿದೆ. ನಾನು ಪ್ರವಾಸ ಬಂದಾಗ ತಾವು ಹೇಳಿದ್ದೀರಿ. ಇದರ ಬಗ್ಗೆ ನಾನು ತನಿಖೆ ನಡೆಸುತ್ತೇನೆ. ಚೂರುಪಾರು ನೀರು ಸಿಕ್ಕಿತ್ತದೆ ಎಂದು ಗೊತ್ತಾದರೆ, ಸರ್ಕಾರವು ಸೂಕ್ತವಾದ ನಿರ್ಧಾರವನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.

ಶ್ರೀ ಬಿ. ಸ್ವಾಮಿರಾವ್.—ಇದರ ಬಗ್ಗೆ ಮಾಜಿ ಮುಖ್ಯಮಂತ್ರಿಗಳೂ ಹೇಳಿದ್ದಾರೆ, ಹಾಗೂ ಹಾಲಿ ಮುಖ್ಯಮಂತ್ರಿಗಳೂ ಹೇಳಿದ್ದಾರೆ. ತಾವೂ ಕೂಡ ಪರಿಸ್ಥಿತಿಯನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದೀರಿ. ಆದುದರಿಂದ ಈ ಸಮಸ್ಯೆಯನ್ನು ಪರಿಹರಿಸಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಈ ಬಗ್ಗೆ ಒಂದು ವಿಷಯವನ್ನು ಹೇಳಬಯಸುತ್ತೇನೆ. ಏನೆಂದರೆ, ಇದಕ್ಕೆ ನೀರು ಸಿಕ್ಕದೇ ಕೆಲಸ ಮಾಡುವುದು ಕಷ್ಟವಾಗುತ್ತದೆ. ಕುಮುದ್ವತಿ ಪ್ರಾಬ್ಲಂ ಬಗ್ಗೆ ಅಧಿಕಾರಿಗಳೂ ಕೊಟ್ಟಂತಹ ರಿಪೋರ್ಟ್‌ನ್ನು ನಾನು ಓದಿದೆ. ನಾನು ಅಲ್ಲಿಗೆ ಹೋದಾಗ, ಹೋಬಳಿಯ ಜನ ಮಾನ್ಯ ಸದಸ್ಯರ ನೇತೃತ್ವದಲ್ಲಿ ತುಂಬಾ ಒತ್ತಾಯ ಮಾಡಿದರು. ಸರ್ಕಾರವು ಹೆಚ್ಚು ಹಣವನ್ನು ಖರ್ಚುಮಾಡಿದರೆ, ಏನಾದರೂ ಅನುಕೂಲ ಆಗುತ್ತದೆ. ಸುಮ್ಮನೇ ಪಂಪ್ ಹಾಕಿದರೆ, ಏನು ಪ್ರಯೋಜನ ? ನಾನೂ ಕೂಡ ಒಬ್ಬ ಇಂಜಿನಿಯರ್ ಆಗಿರುವುದರಿಂದ, ಸಮಸ್ಯೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದೇನೆ. ಮಾನ್ಯ ಸದಸ್ಯರು ವ್ಯಾಖ್ಯಾನ ಮಾಡಬೇಕಾಗಿಲ್ಲ. ಸಾಧ್ಯವಾಗುತ್ತದೆ ಎಂದು ಸರ್ಕಾರಕ್ಕೆ ಅನಿಸಿದರೆ, ಯಾವುದೇ ಪಕ್ಷಭೇದ ತೋರದೆ, ಈ ಕೆಲಸವನ್ನು ಮಾಡುತ್ತೇವೆ,

ಪ್ರಶ್ನೆ ಸಂಖ್ಯೆ ೪೫೫ (೧೦೭೦)
(ಸದಸ್ಯರು ಗೈರು ಹಾಜರಿದ್ದರು)
ಪ್ರಶ್ನೆ ಸಂಖ್ಯೆ ೪೭೯ (೧೬೨೧)
(ಸದಸ್ಯರು ಗೈರು ಹಾಜರಿದ್ದರು)
ಪ್ರಶ್ನೆ ಸಂಖ್ಯೆ ೪೮೨ (೧೬೫೧)
(ಸದಸ್ಯರು ಗೈರು ಹಾಜರಿದ್ದರು)
ಪ್ರಶ್ನೆ ಸಂಖ್ಯೆ ೪೭೭ (೯೦೬)

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಗಳು).—ಅಧ್ಯಕ್ಷರೇ, ಈ ಪ್ರಶ್ನೆಗೆ ಉತ್ತರ ನೀಡಲು ಸ್ವಲ್ಪ ಕಾಲಾವಕಾಶ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ.